ಆಸ್ಟ್ರೇಲಿಯಾದ ಮೂಲನಿವಾಸಿಗಳ ಜನಪದ ಕಥೆಗಳನ್ನು ದಾಖಲಿಸಿರುವ ಕೆ.ಲಾಂಗ್ಲೋಹ್ ಪಾರ್ಕರ್ ಅವರ ಮೂಲ ಹೆಸರು ಕ್ಯಾಥರಿನ್ ಎಲಿಸಾ ಸೋಮರ್‌ವಿಲ್ ಸ್ಟೋ. 1856ರ ಮೇ 1ರಂದು ಜನಿಸಿದ ಅವರು 1940ರ ಮಾರ್ಚ್ 27ರಂದು ತೀರಿಕೊಂಡರು. ಆ ಕಾಲದ ಜನಪ್ರಿಯ ಬರಹಗಾರ್ತಿಯಾಗಿ ಗುರುತಿಸಿಕೊಂಡವರು. ಪ್ರಸ್ತುತ ಕಥೆಯನ್ನು 'ಮೋರ್ ಆಸ್ಟ್ರೇಲಿಯನ್ ಲೆಜೆಂಡರಿ ಟೇಲ್ಸ್' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಆದರೆ ಆಗಾಗ ಪೋಸಮ್ಮುಗಳೆಂಬ ಒಂದು ಬಗೆಯ ಬೆಕ್ಕುಗಳ ಹಲ್ಲುಗಳನ್ನು ಉಪಯೋಗಿಸಿ ತನ್ನ ಆಯುಧಗಳನ್ನು ಮಸೆಯುತ್ತಿದ್ದು, ಅವನು ತನ್ನ ಮಗನತ್ತ ನೋಡಿದಾಗ ಅವನ ಮುಖದಲ್ಲಿ ಏನೋ ಜಂಬ ಕಾಣುತ್ತಿತ್ತು. ಅವನ ಹೆಂಡತಿ ಮತ್ತು ಮಗ ಇಬ್ಬರೂ ಅವನ ಜಂಬದ ಮುಖವನ್ನು ನೋಡಿ ನಗುತ್ತಿದ್ದರು. ಪಂಗಡದ ಹಿರಿಯರಿಗೆ ಏನೋ ಸಮಾಧಾನ, ಸದ್ಯ ಪರ್ಲೀಮಿಲಳನ್ನು, ಹೆಂಡಿರ-ಕಟುಕ ಟಿಲ್ಕಾಗೆ ವಹಿಸಲಿಲ್ಲ ಎಂದು.

ಚಳಿಗಾಲ ಮುಗಿಯಿತು. ಬೇಸಿಗೆ ಬರುತ್ತಿದ್ದ ಹಾಗೇ ಗುಂಪಿನವರೆಲ್ಲಾ ಪರ್ಲೀಮಿಲ್ ಮತ್ತು ವಿಂಬಾಕೊಬೊಲೊ ಅವರನ್ನು ಹಿಂದೆ ಬಂದು ಸೇರಿದ ಸ್ಥಳಕ್ಕೇ ಹಿಂತಿರುಗಿ ಹೋದರು.

ಆದರೆ ಪರ್ಲೀಮಿಲ್ ಮುಂದೆ ಹಾಡಲಿಲ್ಲ. ದೈವಗಳು ಅವಳಿಗೆ ಎಚ್ಚರಿಕೆ ನೀಡಿದವು –ದುರ್ಗತಿ ನಿನಗೆ ಕಾದಿದೆ.

'ನಾವು ಚಳಿಗಾಲದ ಬೀಡಿನಲ್ಲಿಯೇ ಇದ್ದುಬಿಡೋಣ. ಇಲ್ಲಿ ನಾವು ಸಂತೋಷದಿಂದ ಚೆನ್ನಾಗಿದ್ದೇವೆ. ನಾವು ಅಲ್ಲಿಗೆ ಹೋದರೆ ನಮ್ಮ ಚಿಕ್ಕ ಯಜಮಾನನನ್ನು ಕಳೆದುಕೊಳ್ಳುತ್ತೇವೆ ಎಂಬ ಭಯ ನನಗೆ. ಇಲ್ಲಿಯೇ ಇದ್ದುಬಿಡೋಣ, ಪ್ರಿಯ', ಎಂದು ಪರ್ಲೀಮಿಲ್ ಗಂಡನನ್ನು ಅಂಗಲಾಚಿದಳು.

'ಅದಾಗದು, ನನ್ನ ಪ್ರಿಯೆ. ಹಾಗೆ ಮಾಡಿದರೆ ನನ್ನನ್ನು ಅಂಜುಬುರುಕ ಎಂದು ಕರೆಯುತ್ತಾರೆ. ನಾನು ಟಿಲ್ಕಾನನ್ನು ಸಂಧಿಸಲು ಹೆದರಿದೆ ಎಂದು ಬಗೆಯುತ್ತಾರೆ' ಎಂದು ಗಂಡ ಉತ್ತರಿಸಿದ.

'ನಮ್ಮ ಚಿಕ್ಕ ಯಜಮಾನನನ್ನು ಕಳೆದುಕೊಳ್ಳುವುದಕ್ಕಿಂತ ಅಂಜುಬುರುಕ ಎಂದೆನ್ನಿಸಿಕೊಳ್ಳುವುದೇ ಒಳ್ಳೆಯದು. ಎಲ್ಲರಿಗೂ ಗೊತ್ತು, ನೀನು ಅಂಥವನಲ್ಲ ಎಂಬುದು. ಮಗನಿಲ್ಲದೆ ನಮ್ಮ ಜೀವನದಲ್ಲಿ ಕತ್ತಲು ಕವಿಯುತ್ತದೆ. ಅವನು ನಮ್ಮ ದಿನಗಳಿಗೆ ಬೆಳಕು ಕೊಡುವ ಸೂರ್ಯ. ಅವನಿಲ್ಲದೇ ಎಲ್ಲ ಶೂನ್ಯವಾಗುತ್ತದೆ.'

'ಅದೇನೋ ನಿಜ, ಪ್ರಿಯೆ. ಅವನು ನಮ್ಮೊಡನೆ ಇಷ್ಟು ದಿನವಿದ್ದು, ಅವನಿಲ್ಲದೆ ಹೋದರೆ ಜೀವನಕ್ಕೆ ಮಂಕು ಬಡಿಯುತ್ತದೆ. ಒಪ್ಪಿಕೊಳ್ಳುತ್ತೇನೆ. ಆದರೆ, ನಾವು ಅವನನ್ನೇಕೆ ಕಳೆದುಕೊಳ್ಳುತ್ತೀವಿ? ಅವನು ಬಯಲಿನಲ್ಲಿ ಸದಾ ವಾಸಿಸುತ್ತಾನೆ ಎಂದು ದೈವ ಹೇಳಿಲ್ಲವೆ? ಇನ್ನು ಹೆದರಿಕೆ ಏಕೆ, ಪ್ರಿಯೆ?'

'ನಾನೇನೂ ಹೇಳಲಾರೆ. ಹೌದು. ಹಿಂದೆ ದೈವ ಹಾಗೆ ನುಡಿದಿತ್ತು. ಆದರೆ ಈಗ ಪ್ರತಿಯೊಂದು ಬಾರಿ ಗಾಳಿ ಬೀಸಿದಾಗಲೂ ಅವು ಹೇಳುತ್ತವೆ – ನಿನಗೆ ದುರ್ಗತಿ ಕಾದಿದೆ.'

'ಆದರೆ ಅದು ನಮ್ಮ ಚಿಕ್ಕ ಯಜಮಾನನಿಗಲ್ಲ, ಗುಂಪಿನ ಮಿಕ್ಕವರಿಗೆ ಇದ್ದರೂ ಇದ್ದೀತು. ನಮಗೆ ಆಶ್ರಯ ನೀಡಿದ ಗುಂಪನ್ನು ತ್ಯಜಿಸಿ, ಅವರು ದುರ್ಗತಿಯನ್ನು ಎದುರಿಸುವಂತೆ ಮಾಡುವುದು ನ್ಯಾಯವೇ? ಚಿಕ್ಕ ಯಜಮಾನನ ತಾಯಿಯೇ, ನನ್ನೊಡನೆ ಧೈರ್ಯವಾಗಿ ಬಾ. ನಿನ್ನ ಮಗ ನಿನ್ನ ಭಯದ ಎದೆಹಾಲನ್ನು ಕುಡಿಯುವುದು ಬೇಡ.'

ಪರ್ಲೀಮಿಲ್ ತನ್ನ ಕಂದನನ್ನು ತಬ್ಬಿಕೊಂಡಳು. ಮತ್ತೆ ತನ್ನ ಭಯದ ಬಗ್ಗೆ ಮಾತಾನಾಡಲಿಲ್ಲ. ಕಾಲ ಉರುಳಿತು. ಹೊಸ ಬೀಡಿನಲ್ಲಿ ಹಳೆಯ ಜನವೇ ಸಂತಸದಿಂದಿದ್ದರು. ಭಯಗಳೆಲ್ಲಾ ಮರೆತುಹೋದವು. ದೈವಗಳು ಎಚ್ಚರಿಕೆ ನೀಡುವುದನ್ನು ನಿಲ್ಲಿಸಿದವು.

ತಮ್ಮ ಮುಂದಿರುವ ಅಪಾಯದ ಪರಿವೆಯೇ ಇಲ್ಲದೆ ಎಲ್ಲರೂ ಒಂದು ರಾತ್ರಿ ಮಲಗಿದ್ದರು. ಅವರ ಶತ್ರುಗಳು ಅವರ ಮೇಲೆರಗಲು ಹೊಂಚುಹಾಕುತ್ತಿದ್ದರು. ಅವರು ಹತ್ತಿರ ಹತ್ತಿರಕ್ಕೆ ಬಂದರು. ಕಪಟಿ ಟಿಲ್ಕಾನೇ ಅವರ ಮುಂದಾಳು. ಎಲ್ಲರೊಡನೆ ಹೊರಗೆ ಕಾದಾಡಲು